ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-೫೬೦ ೦೫೬.

ಸಂಖ್ಯೆ. ಎಸಿಎ-2/ವಿ.ವಿ.ಪ.ಸಾ.ಸಭೆ/2022-23

ದಿನಾಂಕ: 29.09.2022

ಗೆ,

ಮಾನ್ಯ ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-56.

ಮಾನ್ಯರೆ,

ವಿಷಯ: ದಿನಾಂಕ: 21.09.2022ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ದಿನಾಂಕ: 21.09.2022ರಂದು ಬೆಳಗ್ಗೆ 11.00 ಗಂಟೆಗೆ ಜ್ಞಾನಭಾರತಿ ಆವರಣದ ಸನೆಟ್ ಸಭಾಂಗಣದಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.18ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ಆದೇಶಾನುಸಾರ

ಕುಲಸಚಿವರು

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು, ರಾಜಭವನ, ಬೆಂಗಳೂರು-560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು–ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಬೆಂಗಳೂರು — ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-56

ಸಂಖ್ಯೆ:ಎಸಿಎ-2/ಎ2/ವಿ.ವಿ.ಪ.ಸಾ.ಸಭೆ/2022-23 ದಿನಾಂಕ: 23.09.2022

ದಿನಾಂಕ: 21.09.2022ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣ ಆಡಳಿತ ವಿಭಾಗದ 'ಸೆನೆಟ್ ಸಭಾಂಗಣ'ದಲ್ಲಿ ಬೆಳಿಗ್ಗೆ 11.00 ಗಂಟೆಗೆ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು:

**ಹಾಜರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಡಾ. ಜಯಕರ. ಎಸ್.ಎಮ್. ಕುಲಪತಿಗಳು, ಬೆಂ.ವಿ.ಬೆಂ. | ಅಧ್ಯಕ್ಷರು |
| 2. | ಶ್ರೀಮತಿ ಪದ್ಮ. ವಿ, ಪ್ರಾಂಶುಪಾಲರು | ಸದಸ್ಯರು |
| 3. | ಡಾ. ಧನಂಜಯ ಬಿ.ಆರ್. ಪ್ರಾಂಶುಪಾಲರು | ಸದಸ್ಯರು |
| 4. | ಡಾ. ಎಂ. ಶೈಲಜ. ಪ್ರಾಂಶುಪಾಲರು | ಸದಸ್ಯರು |
| 5. | ಡಾ. ಸುಧೀರ್ ಪೈ. ಕೆ.ಎಲ್. ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀ ಹರೀಶ್ ನಾಯ್ಕ್, ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಕೆ.ಎ. ಮಹೇಶ್ವರಯ್ಯ, ಪ್ರಾಂಶುಪಾಲರು | ಸದಸ್ಯರು |
| 8. | ಶ್ರೀಮತಿ ಕ್ಷಮಾ ಕುಲಕರ್ಣಿ, ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಎ.ಎನ್. ವೆಂಕಟೇಶ | ಸದಸ್ಯರು |
| 10. | ಶ್ರೀ ಕೆ. ರವಿ | ಸದಸ್ಯರು |
| 11. | ಶ್ರೀ ದೊಡ್ಡೇಗೌಡ | ಸದಸ್ಯರು |
| 12. | ಡಾ. ರಾಮಕೃಷ್ಣ ದಾಮ್ಲೆ, ಪ್ರಾಧ್ಯಾಪಕರು | ಸದಸ್ಯರು |
| 13. | ಡಾ. ಕೆ.ಎಸ್. ವಿಜಯಲಕ್ಷ್ಮಿ, ಪ್ರಾಧ್ಯಾಪಕರು, | ಸದಸ್ಯರು |
| 14. | ಡಾ. ಸಿ. ಸೋಮಶೇಖರ್, ಪ್ರಾಧ್ಯಾಪಕರು, | ಸದಸ್ಯರು |
| 15. | ಡಾ. ಸಿಂಥಿಯ ಮೆನೇಜಸ್, ಡೀನರು, ವಾಣಿಜ್ಯ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 16. | ಡಾ. ವಿ.ವಿ. ಸುರೇಶ್ ಬಾಬು, ಡೀನರು, ವಿಜ್ಞಾನ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 17. | ಡಾ. ಎಂ. ನಾರಾಯಣ ಸ್ವಾಮಿ, ಡೀನರು, ಶಿಕ್ಷಣ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 18. | ಡಾ. ಪಾಲ್ ವಿರ್ಸ್ಯೂನ್, ಎಸ್. ಡೀನರು, ತಾಂತ್ರಿಕ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 19. | ಡಾ. ಸಿ. ನಾಗಭೂಷಣ, ಡೀನರು, ಕಲಾ ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 20. | ಡಾ. ಸುರೇಶ್ ವಿ ನಾಡಗೌಡರ್, ಡೀನರು, ಕಾನೂನು ನಿಕಾಯ, ಬೆಂ.ವಿ.ಬೆಂ. | ಸದಸ್ಯರು |
| 21. | ಶ್ರೀ ಎಲ್. ಎನ್. ಮಂಜುನಾಥ್ | ಸದಸ್ಯರು |
| 22. | ಡಾ. ತಮ್ಮಯ್ಯ ಆರ್. ಬಿ, ಸಹ ಪ್ರಾಧ್ಯಾಪಕರು | ಸದಸ್ಯರು |
| 23. | ಶ್ರೀಮತಿ ಕೃಪಾ ಪ್ರಕಾಶ್ | ಸದಸ್ಯರು |
| 24. | ಶ್ರೀ ಎಂ. ರಾಘವೇಂದ್ರ ಬಾಳಿಗ | ಸದಸ್ಯರು |
| 25. | ಶ್ರೀ ಜಯರಾಮ್ ವಿ.ಎಲ್. | ಸದಸ್ಯರು |
| 26. | ಡಾ. ಸಿ.ಡಿ. ವೆಂಕಟೇಶ್, ನಿರ್ದೇಶಕರು (ಪ್ರಭಾರ), ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 27. | ಪ್ರೊ. ಪಿ.ಸಿ. ಕೃಷ್ಣಸ್ವಾಮಿ, ನಿರ್ದೇಶಕರು, ದೈಹಿಕ ಶಿಕ್ಷಣ ನಿರ್ದೇಶನಾಲಯ, ಬೆಂ.ವಿ.ಬೆಂ. | ಸದಸ್ಯರು |
| 28. | ಡಾ. ಜೆ.ಟಿ. ದೇವರಾಜು, ಕುಲಸಚಿವರು (ಮೌಲ್ಯಮಾಪನ), ಬೆಂ.ವಿ.ಬೆಂ. | ಸದಸ್ಯರು |
| 29. | ಶ್ರೀ ಅಜಿತ್ ಕುಮಾರ್ ಹೆಗ್ಡೆ, ವಿತ್ತಾಧಿಕಾರಿಗಳು, ಬೆಂ.ವಿ.ಬೆಂ. | ಸದಸ್ಯರು |
| 30. | ಪ್ರೊ. ಎಂ. ಕೊಟ್ರೇಶ್, ಕುಲಸಚಿವರು, ಬೆಂ.ವಿ.ಬೆಂ. | ಸದಸ್ಯ ಕಾರ್ಯದರ್ಶಿ |

ಮಾನ್ಯ ಕುಲಸಚಿವರು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ಕೋರುತ್ತಾ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿ ನೇಮಕಗೊಂಡಿರುವ ಪ್ರೊ: ಎಸ್.ಎಮ್ ಜಯಕರ, ವಿತ್ತಾಧಿಕಾರಿಗಳಾಗಿ ನಿಯೋಜನೆಗೊಂಡು ಅಧಿಕಾರ ವಹಿಸಿಕೊಂಡಿರುವ ಶ್ರೀ ಅಜಿತ್ ಕುಮಾರ್ ಹೆಗ್ಡೆ, ಹಾಗೂ ಹಿರಿಯ ಪ್ರಾಧ್ಯಾಪಕರ ಜೇಷ್ಠತೆಯಲ್ಲಿ ಪರಿಷತ್ತಿಗೆ ನಾಮಕರಣಗೊಂಡಿರುವ ಡಾ. ಆರ್. ಶಶಿಕುಮಾರ್, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಬೆಂ.ವಿ.ಬೆಂ ಇವರುಗಳಿಗೆ ಹಾರ್ಧಿಕ ಸ್ವಾಗತವನ್ನು ಕೋರಿ ವಿದ್ಯಾವಿಷಯಕ ಪರಿಷತ್ ಸಭೆಗೆ ಪರಿಚಯಿಸಿದರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಡಾ. ಸಿ.ಎಸ್. ಕರಿಗಾರ್, ಪ್ರಭಾರ ವಿತ್ತಾಧಿಕಾರಿಗಳು ಹಾಗೂ ಪ್ರೊ. ಜಯಕುಮಾರ್ ಜಿ. ರೆಡ್ಡಿ, ಕಲಾ ನಿಖಾಯದ ಡೀನರು ಇವರುಗಳ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದರು.

ಅವರು ಮುಂದುವರೆದು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿರುವ ರಾಷ್ಟ್ರೀಯ ಸೇವಾ ಯೋಜನೆಯಡಿ ಉತ್ತಮ ಸೇವೆ ಸಲ್ಲಿಸಿರುವ ವಿಶ್ವವಿದ್ಯಾಲಯಕ್ಕೆ ನೀಡಲಾಗುವ ವಾರ್ಷಿಕ ಎನ್.ಎಸ್.ಎಸ್. ಪ್ರಶಸ್ತಿಗೆ ಬೆಂಗಳೂರು ವಿಶ್ವವಿದ್ಯಾಲಯವು ಭಾಜನವಾಗಿರುವ ಸಂತೋಷದ ಸುದ್ಧಿಯನ್ನು ಪರಿಷತ್ತಿನಲ್ಲಿ ಹಂಚಿಕೊಂಡರು ಹಾಗೂ ಮಾಹಿತಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಇನ್ಫೋಸಿಸ್ ಕಂಪನಿಯ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು, ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ವಿಶ್ವವಿದ್ಯಾಲಯದ ಎಲ್ಲಾ ಪ್ರಾಧ್ಯಾಕರುಗಳು ಅದರ ಸದುಪಯೋಗ ಪಡೆದುಕೊಳ್ಳಲಾಗುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಸದಸ್ಯರೆಲ್ಲರೂ ಒಕ್ಕೊರಲಿನಿಂದ ಇದಕ್ಕೆ ಅಭಿನಂದನೆ ಸಲ್ಲಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಇತ್ತೀಚೆಗೆ ರಾಷ್ಟ್ರಮಟ್ಟದಲ್ಲಿ NIRF ರ್ಯಾಂಕಿಂಗ್‌ನಲ್ಲಿ 64ರ ಶ್ರೇಣಿ ದೊರಕಿದ್ದು ವಿಶ್ವವಿದ್ಯಾಲಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ NAAC ಮಾನ್ಯತೆಯ ನವೀಕರಣಕ್ಕಾಗಿ ಇನ್ನೂ ಹಲವು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿರುತ್ತದೆ ಎಂದು ತಿಳಿಸುತ್ತಾ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲು ಕುಲಸಚಿವರಿಗೆ ಸೂಚಿಸಿದರು.

<u>ವಿಷಯ ಸೂಚಿ:</u> 1: ದಿನಾಂಕ 07.04.2022ರ ಪತ್ರದಲ್ಲಿ ಪರಿಚಲನೆ ಮುಖಾಂತರ (By Circulation) ಪಡೆದ ವಿದ್ಯಾವಿಷಯಕ ಪರಿಷತ್ತಿನ ನಡಾವಳಿ ಮತ್ತು ದಿನಾಂಕ 21.04.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ದಿನಾಂಕ 07.04.2022ರ ಪತ್ರದಲ್ಲಿ ಪರಿಚಲನೆ ಮುಖಾಂತರ (By Circulation) ಅನುಮೋದನೆ ಪಡೆದ ವಿದ್ಯಾವಿಷಯಕ ಪರಿಷತ್ತಿನ ನಡಾವಳಿ ಮತ್ತು ದಿನಾಂಕ 21.04.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ತು ಸ್ಥಿರೀಕರಿಸಿತು.

**ವಿಷಯ ಸೂಚಿ:** 2: ದಿನಾಂಕ 07.06.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿ ಮತ್ತು ದಿನಾಂಕ 27.06.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ:

ಚರ್ಚೆಯ ನಂತರ, ದಿನಾಂಕ 07.06.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿ ಮತ್ತು ದಿನಾಂಕ 27.06.2022ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ವಿದ್ಯಾವಿಷಯಕ ಪರಿಷತ್ತು ಸ್ಥಿರೀಕರಿಸಿತು.

**ವಿಷಯ ಸೂಚಿ:** 3: Approval of "Draft Regulations governing the Six Months Certificate Course in Tourist Guideship" reg.

ಕುಲಸಚಿವರು ಮಾತನಾಡಿ ಪ್ರವಾಸೋದ್ಯಮ ಇಲಾಖೆಯಿಂದ ಪ್ರಾಯೋಜಿಸಲ್ಪಡುವ ಮಾರ್ಗದರ್ಶಿಗಳಿಗೆ ಹಾಗೂ ಚಾಲಕರಿಗೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ರೂಪಿಸಲು ಪ್ರಸ್ತಾವನೆ ಬಂದಿದ್ದು, ಅದರಂತೆ 6 ತಿಂಗಳ ಅವಧಿಯ Tourist Guideship ಕೋರ್ಸ್ ನಡೆಸಲು ವಿನಿಯಮಗಳನ್ನು ರಚಿಸಲಾಗಿದೆ. ಇದನ್ನು ಜಾರಿಗೊಳಿಸಿದರೆ ವಿಶ್ವವಿದ್ಯಾಲಯದಿಂದ ವರ್ಷಕ್ಕೆ ಸುಮಾರು 50-100 ಅಭ್ಯರ್ಥಿಗಳಿಗೆ ಶೈಕ್ಷಣಿಕ ತರಬೇತಿ ನೀಡಿ ಸರ್ಟಿಫಿಕೇಟ್ ವಿತರಿಸಿದರೆ ಕೌಶಲ್ಯಾಧಾರಿತ ಉದ್ಯೋಗ ಪಡೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಅಲ್ಲದೆ ಈ ಶೈಕ್ಷಣಿಕ ತರಬೇತಿ ನೀಡುವುದರಿಂದ ಬೆಂಗಳೂರು ವಿಶ್ವವಿದ್ಯಾಲಯದ ಘನತೆಯು ಹೆಚ್ಚಾಗುವುದಲ್ಲದೆ ಸಂಪನ್ಮೂಲವನ್ನು ವೃದ್ಧಿಸಿಕೊಳ್ಳಲೂ ಸಹ ಅನುಕೂಲವಾಗುತ್ತದೆ ಎಂದು ಸಭೆಗೆ ವಿವರಿಸಿದರು.

ಕುಲಸಚಿವರು (ಮೌ) ರವರು ಮಾತನಾಡಿ, ಪ್ರಸ್ತಾಪಿತ ವಿನಿಯಮಗಳ ಪ್ರಕರಣ 3ರಲ್ಲಿ ಪರೀಕ್ಷಾ ಫಲಿತಾಂಶದ ಮಾನದಂಡ ಶೇ.50% ಮತ್ತು ಅದಕ್ಕಿಂತ ಹೆಚ್ಚು ಎಂದು ತಿದ್ದುಪಡಿ ಮಾಡಿಕೊಳ್ಳಲು ಸೂಚಿಸಿದರು ಹಾಗೂ ಅನುಬಂಧ (ಎ) ಅಡಿ ನಿಗದಿಪಡಿಸಿರುವ 40 ಅಂಕಗಳಿಗೆ Viva ಮತ್ತು 60 ಅಂಕಗಳಿಗೆ Report writing ಅಂಕಗಳನ್ನು ಕ್ರಮವಾಗಿ CBCS ಮಾದರಿಯಡಿ ಕ್ರಮವಾಗಿ 30 ಮತ್ತು 70 ಅಂಕಗಳಿಗೆ ಪರಿಷ್ಕರಿಸಲು ಸಲಹೆ ನೀಡಿದರು.

ಪ್ರೊ. ವಿಜಯಲಕ್ಷ್ಮೀ ರವರು ಮಾತನಾಡಿ, "Tourist Guideship" ಪಠ್ಯಕ್ರಮವು ಪ್ರಚಲಿತ ವಿದ್ಯಮಾನದಲ್ಲಿ ಅತಿ ಹೆಚ್ಚು ಗುಣಮಟ್ಟದಿಂದ ಕೂಡಿರಬೇಕಾಗಿದ್ದು ಸ್ಪರ್ಧಾತ್ಮಕವಾಗಿರಬೇಕು (Competitive) ಮತ್ತು ಈ ವಿಷಯವು ಇತಿಹಾಸ ಆಧಾರಿತವಾಗಿದ್ದು (history oriented ) ವಿಷಯವನ್ನು ಇತಿಹಾಸ ವಿಭಾಗದಲ್ಲಿ ನಿರ್ವಹಿಸುವುದು ಅವಶ್ಯವಾಗಿರುತ್ತದೆ ಎಂದು ತಿಳಿಸಿದರು. ಡಾ. ಸಿಂಥಿಯ ಮೆನೇಜಸ್ ರವರು ಮಾತನಾಡಿ, ಪ್ರಸ್ತಾಪಿತ Course Matrix ನಲ್ಲಿ ಅಸಮರ್ಪಕ ಮತ್ತು ಸಾಕಷ್ಟು ವಿಚಾರಗಳ ಕೊರತೆಯಿರುತ್ತದೆ ಎಂದು ತಿಳಿಸಿದರು. ಸದಸ್ಯರಾದ ಡಾ. ಎಂ. ನಾರಾಯಣ ಸ್ವಾಮಿ ರವರು ಮಾತನಾಡಿ ಪ್ರಸ್ತಾಪಿತ ಸದರಿ Certificate Course ಗೆ ಸಂಬಂಧಿಸಿದಂತೆ, ಭಾರತೀಯ ಪ್ರಾಚ್ಯವಸ್ತು ಇಲಾಖೆಯ ಸಹಯೋಗದೊಂದಿಗೆ ಪಠ್ಯಕ್ರಮಗಳನ್ನು ಸಿದ್ಧಪಡಿಸಿಕೊಂಡು ಕೋರ್ಸನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೋರ್ಸಿನ ಅವಧಿಯನ್ನು ಆರು ತಿಂಗಳಿಂದ ಒಂದು ವರ್ಷಕ್ಕೆ ಹೆಚ್ಚುವರಿಗೊಳಿಸಲು ಸಲಹೆ ನೀಡಿದರು. ಸದಸ್ಯರಾದ ಡಾ. ವಿ.ವಿ. ಸುರೇಶ್ ಬಾಬು ರವರು ಮಾತನಾಡಿ, NEP-2020 ರನ್ವಯ ಸದರಿ ಕೋರ್ಸನ್ನು ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸು ಎಂದು ಪರಿಗಣಿಸಿ, ಆಂತರಿಕ ಅಂಕಗಳು 40 ಮತ್ತು ಪರೀಕ್ಷಾ ಅಂಕಗಳು 60ಕ್ಕೆ ನಿಗದಿಪಡಿಸಬಹುದು ಎಂದು ಸಲಹೆ ನೀಡಿದರು.

ಮುಂದುವರೆದು ಪ್ರೊ: ನಾಡಗೌಡರ್ ಅವರು ಮಾತನಾಡಿ ಪಠ್ಯಕ್ರಮದಲ್ಲಿ English Communication Skills ಕುರಿತು ಅಳವಡಿಸಿದರೆ ಇನ್ನೂ ಪರಿಣಾಮಕಾರಿಯಾಗಿ ತರಬೇತಿ ಪಡೆಯಲು ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ. "Certificate Course in Tourist Guideship" ಕೋರ್ಸನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲು ತಾತ್ವಿಕ ಅನುಮೋದನೆ ನೀಡಿ, ಕೋರ್ಸಿನ ಅವಧಿಯನ್ನು ಒಂದು ವರ್ಷದ ಕೋರ್ಸನ್ನಾಗಿ ಪರಿಗಣಿಸಲು ಹಾಗೂ ಒಂದು ವರ್ಷದ ಕೋರ್ಸನ್ನು ನಡೆಸಲು ವಿಶ್ವವಿದ್ಯಾಲಯಕ್ಕೆ ತಗಲುವ ಹಣಕಾಸಿನ ಸೌಲಭ್ಯವನ್ನು ಸಂಪೂರ್ಣವಾಗಿ ಭರಿಸುವ ಬಗ್ಗೆ ಪ್ರವಾಸೋದ್ಯಮ ಇಲಾಖೆಗೆ ಪತ್ರ ಬರೆದು ಅವರ ಸ್ಪಂಧನೆಯ ನಂತರ ಮುಂದಿನ ಕ್ರಮ ವಹಿಸಬಹುದೆಂದು ನಿರ್ಣಯಿಸಲಾಯಿತು.

**ವಿಷಯ ಸೂಚಿ: 4:** 2021-22ನೇ ಸಾಲಿಗೆ ಸಂಯೋಜನಾ ನವೀಕರಣಕ್ಕೆ ಅರ್ಜಿ ಸಲ್ಲಿಸದಂತಹ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ನಿರ್ಣಯ:

ಸುಧೀರ್ಘ ಚರ್ಚೆಯ ನಂತರ ಪರಾಮರ್ಶನ ಟಿಪ್ಪಣಿಯ ಕ್ರಮಸಂಖ್ಯೆ. 7 ಮತ್ತು 8ರಲ್ಲಿ ನಮೂದಿಸಿರುವ Nightingales Degree College ಮತ್ತು Oxbridge College of Science & Commerce ಗಳಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಸಂಯೋಜನಾ ನವೀಕರಣಕ್ಕೆ ಮನವಿ ಬಂದರೆ ಪರಿಶೀಲಿಸಲು ಅನುಮೋದಿಸಿತು.

ಹಾಗೂ ಉಳಿದ ಕಾಲೇಜುಗಳಿಗೆ ಕೆ.ಎಸ್.ಯು. ಅಧಿನಿಯಮ 2000 ಪ್ರಕರಣ 63ರ ಉಪಪ್ರಕರಣ (6) ರಲ್ಲಿ ಗೊತ್ತುಪಡಿಸಲಾಗಿರುವ ವಿಧಾನಗಳಂತೆ ಸಂಯೋಜನೆಯನ್ನು ರದ್ದುಗೊಳಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿತು.

**ವಿಷಯ ಸೂಚಿ: 5:** ನಾಲ್ಕನೇ ಸೆಮಿಸ್ಟರ್ Bachelor of Business Administration (Aviation Management) ಪದವಿ ಕೋರ್ಸಿನ "PC Software (MS-Office) Theory and Practical" ಎಂಬ ಪತ್ರಿಕೆಯನ್ನು "COMPUTER APPLICATIONS (ಕಂಪ್ಯೂಟರ್ ಅಪ್ಲಿಕೇಶನ್ಸ್)' ಎಂದು ತಿದ್ದುಪಡಿ ಮಾಡಿರುವ ಕ್ರಮವನ್ನು ಅನುಸಮರ್ಥಿಸುವ ಬಗ್ಗೆ.

ನಿರ್ಣಯ:

ಸುಧೀರ್ಘ ಚರ್ಚೆಯ ನಂತರ, ನಾಲ್ಕನೇ ಸೆಮಿಸ್ಟರ್ Bachelor of Business Administration (Aviation Management) ಪದವಿ ಕೋರ್ಸಿನ "PC Software (MS-Office) Theory and Practical" ಎಂಬ ಪತ್ರಿಕೆಯನ್ನು "COMPUTER APPLICATIONS (ಕಂಪ್ಯೂಟರ್ ಅಪ್ಲಿಕೇಶನ್ಸ್)' ಎಂದು ತಿದ್ದುಪಡಿ ಮಾಡಿರುವ ಕ್ರಮವನ್ನು ವಿದ್ಯಾವಿಷಯಕ ಪರಿಷತ್ ಅನುಸಮರ್ಥಿಸಿತು.

**ವಿಷಯ ಸೂಚಿ: 6:** ಬೆಂಗಳೂರು ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರನ್ನು ನಾಮನಿರ್ದೇಶನ ಮಾಡುವ ಬಗ್ಗೆ.

ಸದಸ್ಯರಾದ ಶ್ರೀ ಕೆ. ರವಿ ರವರು ಮಾತನಾಡಿ, ವಿಶ್ವವಿದ್ಯಾಲಯದ ಹಲವು ಪ್ರಾಧಿಕಾರಗಳಿಗೆ ನಾಮನಿರ್ದೇಶನಗೊಂಡ ಸದಸ್ಯರುಗಳನ್ನು ಹೊರತುಪಡಿಸಿ ಇತರೆ ಸದಸ್ಯರುಗಳಿಗೆ ಅವಕಾಶ ಕಲ್ಪಿಸಿಕೊಡಲು ಕೋರಿದರು.

ನಿರ್ಣಯ:

ಚರ್ಚೆಯ ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಹಣಕಾಸು ಸಮಿತಿಗೆ ವಿದ್ಯಾವಿಷಯಕ ಪರಿಷತ್ತಿನ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಕುಲಪತಿಗಳಿಗೆ ಅಧಿಕರಿಸಿತು.

**ವಿಷಯ ಸೂಚಿ: 7 ಮತ್ತು 10:** 2022-23ನೇ ಶೈಕ್ಷಣಿಕ ಸಾಲುಗಳಿಗೆ ಕಾಲೇಜುಗಳ ಸಂಯೋಜನಾ ನವೀಕರಣದ ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಗಳ ಅಧ್ಯಕ್ಷರು ಸಲ್ಲಿಸಿದ ವರದಿಗಳನ್ನು ಪರಿಗಣಿಸುವ ಬಗೆಗೆ.

ನಿರ್ಣಯ:

ಚರ್ಚೆಯ ನಂತರ, ಪರಾಮರ್ಶನ ಟಿಪ್ಪಣಿಯಲ್ಲಿ ನಮೂದಿಸಿರುವ ಕಾಲೇಜುಗಳ ಬಗ್ಗೆ ಸ್ಥಳೀಯ ವಿಚಾರಣಾ ಸಮಿತಿಗಳು ಸಲ್ಲಿಸಿರುವ ಶಿಫಾರಸ್ಸುಗಳನ್ನು ವಿದ್ಯಾವಿಷಯಕ ಪರಿಷತ್ತು ಅಂಗೀಕರಿಸಿತು. ಮುಂದುವರೆದು, ಟ್ರಾನ್ಸೆಂಡ್ ಪದವಿ ಕಾಲೇಜಿಗೆ ಸ್ಥಳೀಯ ವಿಚಾರಣಾ ಸಮಿತಿಯ ವರದಿಯಲ್ಲಿ ಬಿ.ಕಾಂ. ಕೋರ್ಸಿನ ವಿದ್ಯಾರ್ಥಿ ಪ್ರಮಾಣ ಹೆಚ್ಚಳದ ಬಗ್ಗೆ ಶಿಫಾರಸ್ಸು ಇಲ್ಲದಿರುವುದರಿಂದ ಸಿಂಡಿಕೇಟ್ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಿರುವ ಬಗ್ಗೆ ಅಸಮದಾನನ್ನು ವ್ಯಕ್ತಪಡಿಸಿ, ಸದರಿ ಕಾಲೇಜಿನ ಬಿ.ಕಾಂ. ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು 180 ಕ್ಕೆ ಸೀಮಿತಗೊಳಸಲು ವಿದ್ಯಾವಿಷಯಕ ಪರಿಷತ್ತು ನಿರ್ಣಯಿಸಿತು.

**ವಿಷಯ ಸೂಚಿ:** 8: 2022-23ನೇ ಸಾಲಿನಿಂದ ಬನ್ನೇರುಘಟ್ಟ ರಸ್ತೆಯ ದಿ ಕಿಂಗ್‌ಡಮ್ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸುವ ಬಗ್ಗೆ.

ನಿರ್ಣಯ:

ಸುಧೀರ್ಘ ಚರ್ಚೆಯ ನಂತರ ಬನ್ನೇರುಘಟ್ಟ ರಸ್ತೆಯ ದಿ ಕಿಂಗ್‌ಡಮ್ ಕಾಲೇಜಿನ ಸಂಯೋಜನೆಯನ್ನು 2022-23ನೇ ಶೈಕ್ಷಣಿಕ ಸಾಲಿನಿಂದ ರದ್ದುಪಡಿಸಲು ಕೆ.ಎಸ್.ಯು. ಅಧಿನಿಯಮ 2000 ಪ್ರಕರಣ 63ರ ಉಪಪ್ರಕರಣ (6)ರಲ್ಲಿ ಗೊತ್ತುಪಡಿಸಲಾಗಿರುವ ವಿಧಾನಗಳನ್ವಯ ಕ್ರಮವಹಿಸಲು ವಿದ್ಯಾವಿಷಯಕ ಪರಿಷತ್ ಸಭೆಯು ನಿರ್ಣಯಿಸಿತು.

**ವಿಷಯ ಸೂಚಿ:** 9: ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ 3 ಮತ್ತು 4ನೇ ಸೆಮಿಸ್ಟರ್ ಸ್ನಾತಕ ಪದವಿಗಳ (Under-graduate) ಪಠ್ಯಕ್ರಮಗಳನ್ನು ಸಿದ್ಧಪಡಿಸಿ ಜಾರಿಗೊಳಸುವ ಬಗ್ಗೆ ಹಾಗೂ ಕೆಲವು ಸ್ನಾತಕೋತ್ತರ ವಿಭಾಗಗಳ ಪಠ್ಯಕ್ರಮಗಳನ್ನು ಪರಿಷ್ಕರಿಸುವ ಬಗ್ಗೆ.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ ಸ್ನಾತಕ ಪದವಿ ಕೋರ್ಸುಗಳ 3 ಮತ್ತು 4ನೇ ಸೆಮಿಸ್ಟರ್‌ನ ವಿಷಯಗಳಿಗೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ಮಂಡಳಿಗಳು ರಚಿಸಲ್ಪಟ್ಟಿರುವ ಪಠ್ಯಕ್ರಮಗಳ ಬಗ್ಗೆ ವಿವರಣೆಗಳನ್ನು ಕಲಾ, ವಾಣಿಜ್ಯ ಮತ್ತು ವಿಜ್ಞಾನ ನಿಕಾಯಗಳ ಡೀನರುಗಳು ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಸವಿವರವಾಗಿ ಮಂಡಿಸಿದರು:

ನಿರ್ಣಯ: ಚರ್ಚೆಯ ನಂತರ, ವಿದ್ಯಾವಿಷಯಕ ಪರಿಷತ್ತಿನ ಸಭೆಯು 2022-23ನೇ ಶೈಕ್ಷಣಿಕ ಸಾಲಿಗೆ ಜಾರಿಗೆ ಬರುವಂತೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಅನುಸಾರ 3 ಮತ್ತು 4ನೇ ಸೆಮಿಸ್ಟರ್‌ನ ಸ್ನಾತಕ ಪದವಿ (Under-graduate) ಕೋರ್ಸುಗಳಿಗೆ ರಚಿಸಲ್ಪಟ್ಟಿರುವ ಪಠ್ಯಕ್ರಮಗಳಿಗೆ ಶೈಕ್ಷಣಿಕ ಪರಿಷತ್ ಅನುಮೋದನೆ ನೀಡಿತು. ಮುಂದುವರೆದು, ಸಿದ್ಧತೆಯ ಹಂತದಲ್ಲಿರುವ ಪಠ್ಯಕ್ರಮಗಳಿಗೆ ಅವುಗಳು ಸಿದ್ಧವಾದ ಕೂಡಲೇ ಸಂಬಂಧಪಟ್ಟ ಡೀನರುಗಳಿಂದ ಪರಿಶೀಲಿಸಿಕೊಂಡು, ಜಾರಿಗೊಳಸಲು ಪರಿಷತ್ತು ಕುಲಪತಿಗಳಿಗೆ ಅಧಿಕರಿಸಿತು.

ಹಾಗೂ

1. ಕಲಾ ನಿಕಾಯದ ಸಭೆಯಲ್ಲಿ ತೆಗೆದುಕೊಂಡ ಶಿಫಾರಸ್ಸಿನ ಅನ್ವಯ M.S.W. ಕೋರ್ಸಿನ ಪ್ರವೇಶಾತಿಗೆ ನಿಗದಿಪಡಿಸಿದ್ದ ಅರ್ಹತೆಯ ಬಗ್ಗೆ ತೆಗೆದುಕೊಂಡಿರುವ ತಿದ್ದುಪಡಿಯನ್ನು ಅನುಮೋದಿಸಿ ತಿದ್ದುಪಡಿಗೆ ಕುಲಾಧಿಪತಿಯವರ ಅಂಕಿತ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಶಿಫಾರಸ್ಸು ಮಾಡಿತು.

2. ವಿಜ್ಞಾನ ನಿಕಾಯದಲ್ಲಿ ತೆಗೆದುಕೊಂಡಿರುವ ಶಿಫಾರಸ್ಸಿನ ಅನ್ವಯ ಸ್ನಾತಕೋತ್ತರ ಪದವಿಗಳಾದ Biotechnology and Microbiology ಯ ಕೋರ್ಸುಗಳಿಗೆ ಪರಿಷ್ಕರಿಸಿರುವ ಪಠ್ಯಕ್ರಮಗಳನ್ನು 2022-23ನೇ ಸಾಲಿನಿಂದ ಜಾರಿಗೊಳಿಸಲು ಅನುಮೋದನೆ ನೀಡಿತು. ಹಾಗೂ ನಿಕಾಯಗಳ ಇತರೆ ನಿರ್ಣಯಗಳನ್ನು ಅಂಗೀಕರಿಸಿತು.

**ವಿಷಯ ಸೂಚಿ:** 11: 2022-23ನೇ ಸಾಲಿಗೆ ಬಿ.ಟಿ.ಎಲ್. ಕಾಲೇಜ್ ಆಫ್ ಎಜುಕೇಷನ್‌ಗೆ ಸಂಯೋಜನಾ ನವೀಕರಣದ ವಿಷಯದಲ್ಲಿ ಸಲ್ಲಿಸಲಾದ ಸ್ಥಳೀಯ ವಿಚಾರಣಾ ವರದಿಯನ್ನು ಪರಿಗಣಿಸುವ ಬಗ್ಗೆ.

ಸದಸ್ಯರಾದ ಪ್ರೊ. ನಾರಾಯಣ ಸ್ವಾಮಿಯವರು ಮಾತನಾಡಿ, 2022-23ನೇ ಶೈಕ್ಷಣಿಕ ಸಾಲುಗಳಿಗೆ ತಡವಾಗಿ ಅರ್ಜಿ ಸಲ್ಲಿಸಿದ ಕಾಲೇಜುಗಳ ಸಂಯೋಜನಾ ನವೀಕರಣದ ಪ್ರಸ್ತಾವನೆಗಳನ್ನು ಸ್ಥಳೀಯ ವಿಚಾರಣಾ ಸಮಿತಿಗಳಿಗೆ ನೀಡದೆ ತಿರಸ್ಕರಿಸಬಹುದಾಗಿತ್ತು ಎಂದು ತಿಳಿಸಿ ಪ್ರಸ್ತುತ BTL College of Education ನ ಸಂಯೋಜನಾ ನವೀಕರಣ ಮಾಡಲು ರಚಿಸಿರುವ ಸ್ಥಳೀಯ ವಿಚಾರಣಾ ಸಮಿತಿಯಲ್ಲಿ ವಿಷಯ ತಜ್ಞರನ್ನು ನೇಮಿಸದಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು. ಮಾನ್ಯ ಕುಲಪತಿಗಳು ಮಾತನಾಡಿ ಕಾಲೇಜುಗಳಿಂದ ಬಂದ ಸಂಯೋಜನಾ ಪ್ರಸ್ತಾವನೆಗಳನ್ನು ಸಂಬಂಧಿಸಿದ ಡೀನರುಗಳಿಂದ ಪರಿಶೀಲಿಸಿ (scrutiny) ಅಭಿಪ್ರಾಯ ಪಡೆದುಕೊಳ್ಳುವುದು ಸೂಕ್ತವೆಂದು ತಿಳಿಸಿದರು.

ಮುಂದುವರೆದು, ಪ್ರೊ. ಸುರೇಶ್ ಬಾಬುರವರು ಮಾತನಾಡಿ, ಸರ್ಕಾರದ ನಿರ್ದೇಶನಗಳನ್ವಯ 2022-23ನೇ ಶೈಕ್ಷಣಿಕ ಸಾಲಿಗೆ ಸ್ಥಳೀಯ ವಿಚಾರಣಾ ಸಮಿತಿಗಳು ತರಾತುರಿಯಲ್ಲಿ ಕಾಲೇಜುಗಳ ಪರಿವೀಕ್ಷಣೆ ನಡೆಸಿ ವರದಿಗಳನ್ನು ಸಲ್ಲಿಸಿರುತ್ತಾರೆ ಆದರೆ, 2023-24ನೇ ಶೈಕ್ಷಣಿಕ ಸಾಲುಗಳಿಗೆ ಕಾಲೇಜುಗಳ ಸಂಯೋಜನಾ ನವೀಕರಣದ ಪ್ರಕ್ರಿಯೆಗಳು ಸಕಾಲದಲ್ಲಿ ನಡೆಯುವಂತೆ ಕ್ರಮವಹಿಸಲು ಅಭಿಪ್ರಾಯ ವ್ಯಕ್ತಪಡಿಸಿದರು.

ನಿರ್ಣಯ: ಚರ್ಚೆಯ ನಂತರ ವಿದ್ಯಾವಿಷಯಕ ಪರಿಷತ್ತಿನ ಸಭೆಯು ಬಿ.ಟಿ.ಎಲ್. ಕಾಲೇಜ್ ಆಫ್ ಎಜುಕೇಷನ್‌ಗೆ ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಉದಯ್ ಕುಮಾರ್ ಎಂ. ರವರ ಅಧ್ಯಕ್ಷತೆಯಲ್ಲಿ ಸಲ್ಲಿಸಿರುವ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000ದ 59 (8) ರ ಪ್ರಕರಣದಡಿ ಪರಿಗಣಿಸಿತು.

ವಿಷಯ ಸೂಚಿ: 12: The Statutes relating to appointment and promotion of teachers and other Academic Staff and measures for the maintenance of standards in Higher Education in the Bangalore University, as per the UGC Regulations 2018.

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾಲಯಗಳಲ್ಲಿ ಬೋಧಕ ಹುದ್ದೆಗಳನ್ನು ಭರ್ತಿಮಾಡಿಕೊಳ್ಳುವ ಸಂಬಂಧ ಹಾಗೂ ನೂತನ ರಾಷ್ಟ್ರೀಯ ಶಿಕ್ಷಣ ನೀತಿ-2020ರ ಮುನ್ನೋಟದ ಹಾಗೂ ವಿಶ್ವವಿದ್ಯಾಲಯದಲ್ಲಿನ ನೇಮಕಾತಿಗಳ ವಿಧಿ-ವಿಧಾನಗಳ ಕುರಿತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ಯು.ಜಿ.ಸಿ. 2018ರ ನೇಮಕಾತಿ ನಿಯಮಾವಳಿಗಳ ಕರಡು ವಿನಿಯಮಗಳ ಪ್ರತಿಗಳನ್ನು ಎಲ್ಲಾ ವಿಶ್ವವಿದ್ಯಾಲಯಗಳಿಗೆ ರವಾನಿಸಿರುವ ವಿಚಾರವನ್ನು ಪ್ರೊ. ನಾಡಗೌಡರ್ ರವರು ಸಭೆಯ ಗಮನಕ್ಕೆ ತಂದರು. ಸದರಿ ಕರಡು ಪರಿನಿಯಮಾವಳಿಗಳು Assistant Professor, Librarians, Assistant Director of Physical Education ರವರ ನೇಮಕಾತಿಯ ಪ್ರಕ್ರಿಯೆಗೆ ಸಂಬಂಧಪಟ್ಟಿದ್ದು, ಈ ಕುರಿತು ಕರಡು ಪರಿನಿಯಮಾವಳಿಗಳ ರಚಾನಾ ಸಮಿತಿಯ ಅಧ್ಯಕ್ಷರಾಗಿ ಸರ್ಕಾರದಿಂದ ಬಂದಿರುವ ಮಾದರಿ ಪರಿನಿಯಮಾವಳಿಗಳನ್ನು ಪರಿಶೀಲಿಸಿ ಒಂದು ಕರಡು ಪರಿನಿಯಮಾವಳಿಯನ್ನು ರಚಿಸಿ ವಿದ್ಯಾಬವಿಷಯಕ ಪರಿಷತ್‌ನ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಕರ್ನಾಟಕದ ಬಹುತೇಕ ಎಲ್ಲಾ ವಿಶ್ವವಿದ್ಯಾಲಯಗಳು ಈ ಮಾದರಿಯನ್ನು ಒಪ್ಪಿ ಸರ್ಕಾರಕ್ಕೆ ಕನಿಷ್ಟ ಬದಲಾವಣೆ/ತಿದ್ದುಪಡಿಗಳನ್ನು ಮಾಡಿಕೊಂಡು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿರುತ್ತಾರೆ ರಾಜ್ಯದ ಎಲ್ಲಾ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಅಧ್ಯಾಪಕರ ಕೊರತೆಯಿದ್ದು ಹಲವು ವಿಭಾಗಗಲ್ಲಿ ಶೇ. 50% ರಷ್ಟಿನ ಬೋಧನಾ ಕಾರ್ಯಭಾರವನ್ನು ಅತಿಥಿ ಉಪನ್ಯಾಸಕರೇ ನಿರ್ವಹಿಸುತ್ತಿದ್ದು ಸರ್ಕಾರವು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಖಾಂತರ ಪರೀಕ್ಷೆಗಳನ್ನು ನಡೆಸಿ ನೇರ ನೇಮಕಾತಿಗನ್ನು ಮಾಡಿ ಶೈಕ್ಷಣಿಕ ಗುಣಮಟ್ಟವನ್ನು ಬಲಪಡಿಸಲು ಉತ್ಸುಕತೆಯನ್ನು ತೋರಿಸಿರುತ್ತದೆ ಎಂದು ತಿಳಿಸಿದರು.

ಸದಸ್ಯಾರದ ಪ್ರೊ. ರಾಮಕೃಷ್ಣ ದಾಮ್ಲೆಯವರು ಮಾತನಾಡಿ, ಅಭ್ಯರ್ಥಿಗಳ ಮೌಲ್ಯೀಕರಣದಲ್ಲಿ (assessment) subjective ವಿಷಯವು ಅತಿ ಕಡಿಮೆಯಾಗಿದ್ದು, objective ವಿಷಯವನ್ನು ಹೆಚ್ಚುಮಾಡಿರುವುದರಿಂದ ಕೆಲವು ಅಭ್ಯರ್ಥಿಗಳು/ಸಂಶೋಧಕರು ತಮ್ಮ ಸಂಶೋಧನಾ ಪತ್ರಿಕೆಗಳನ್ನು UGC Peer-Reviewed ಜರ್ನಲ್ ಅಲ್ಲದ ಇತರೆ ಜರ್ನಲ್‌ಗಳಲ್ಲಿ ಪ್ರಕಟಿಸಿ ತಮ್ಮ API ಅಂಕಗಳನ್ನು ಹೆಚ್ಚು ಮಾಡಿಕೊಳ್ಳುತ್ತಾರೆ. ಇದರಿಂದಾಗಿ ಅರ್ಹ ಅಭ್ಯರ್ಥಿಗಳಿಗೆ ಅನಾನುಕೂಲವಾಗುತ್ತದೆ ಹಾಗೂ ಪ್ರಸ್ತುತ ಬೋಧನಾ ಕೌಶಲ್ಯಾ ಮತ್ತು Subject Evaluation ಗೆ ಆಧ್ಯತೆ ನೀಡಲಾಗುತ್ತಿಲ್ಲ ಎಂದು ತಿಳಿಸಿ, ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಯ ಶೈಕ್ಷಣಿಕ ಕೌಶಲ್ಯಗಳನ್ನು ಮೌಲ್ಯೀಕರಿಸುವ ಕುರಿತು ಹೆಚ್ಚಿನ ಆಧ್ಯತೆ ನೀಡಲು ಕರಡು ಪರಿನಿಯಮಗಳಲ್ಲಿ ಸೇರಿಸಲಾಗಿದೆಯೇ ಎಂದು

ಸ್ಪಷ್ಟೀಕರಣ ಕೋರಿದರು. ಪ್ರೊ. ಸುರೇಶ್ ವಿ ನಾಡಗೌಡರ್ ರವರು ಉತ್ತರಿಸಿ, ಪ್ರಸ್ತಾಪಿತ ಕರಡು ನೇಮಕಾತಿಯ ವಿನಿಯಮಗಳಲ್ಲಿ ಶೇ. 50% Entrance Score ಮುಖಾಂತರ ಹಾಗೂ ಶೇ. 50% ರಷ್ಟು Evaluation Method ಮೂಲಕ ನೇಮಕಾತಿ ಮಾಡಲಾಗುವುದು. ಪ್ರಮುಖವಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ ಸಂದರ್ಶನಕ್ಕೆ ಮೀಸಲಿಟ್ಟ ಅಂಕಗಳಲ್ಲಿ ಶೇ. 12.5 ರಷ್ಟು ಅಂಕಗಳನ್ನು Domain Knowledge ಬಗ್ಗೆ ಅಭ್ಯರ್ಥಿಯ ಶೈಕ್ಷಣಿಕ ಗುಣಮಟ್ಟವನ್ನು ಪರಿಶೀಲಿಸಬಹುದು ಎಂದು ತಿಳಿಸಿದರು.

ಡಾ. ಸಿಂಥಿಯ ಮೆನೇಜಸ್ ರವರು ಮಾತನಾಡಿ, ಪಿ.ಎಚ್‌ಡಿ. ಪದವಿಯ ಮಾನದಂಡದ ಕುರಿತು Regular Mode ಎಂದು ವಿನಿಯಮಗಳಲ್ಲಿ ನಿಖರವಾಗಿ ನಮೂದಿಸಿ ಎಂದು ಹೇಳಿದರು. ಈ ಕುರಿತು ಪ್ರೊ. ಸುರೇಶ್ ವಿ ನಾಡಗೌಡರ್ ರವರು ಉತ್ತರಿಸಿ, ಅಭ್ಯರ್ಥಿಯ ನೇಮಕಾತಿಗಾಗಿ ಸಲ್ಲಿಸಿರುವ ಅರ್ಜಿಯನ್ನು ವಿಶ್ವವಿದ್ಯಾಲಯದಿಂದ ರಚಿಸಲ್ಪಡುವ Screening Committee ಮುಂದೆ ಮಂಡಿಸಿ Quality of Journal ಮತ್ತು ಇತರೆ ಅಂಶಗಳ ಬಗ್ಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.

ಪ್ರೊ. ರಾಮಕೃಷ್ಣ ದಾಮ್ಲೆಯವರು ಮಾತನಾಡಿ, ಯು.ಜಿ.ಸಿ. ಯ Consortium for Academic and Research Ethics ಪಟ್ಟಿಯಲ್ಲಿ ಹಲವು ನ್ಯೂನ್ಯತೆಗಳಿದ್ದು, Journal ಗಳ ಬಗ್ಗೆ Review ಮಾಡಲು ITHIOPIA, NIGERIA ದಂತಹ ದೇಶಗಳಲ್ಲಿರುವ ಸಣ್ಣ-ಪುಟ್ಟ ಕಾಲೇಜುಗಳ ಅಧ್ಯಾಪಕರುಗಳು Review ಮಾಡುತ್ತಾರೆ. Peer-Reviewed ಎಂಬ ಶಬ್ಧಕ್ಕೆ ಅರ್ಥವೇ ಇಲ್ಲದಂತಾಗಿದ್ದು ಶೈಕ್ಷಣಿಕ ಗುಣಮಟ್ಟ ಇರುವುದಿಲ್ಲ. ಭಾರತದಲ್ಲಿ ಒಂದು ಸಣ್ಣ ಪುಸ್ತಕಗಳಿಗೂ ISBN, ISSN ಸಂಖ್ಯೆ ತೆಗೆದುಕೊಳ್ಳುವುದು ಅತಿ ಸುಲಭದ ಕೆಲಸವಾಗಿದೆ ಎಂದರು. ಸದರಿ ಅಜೆಂಡಾವನ್ನು ಟೇಬಲ್ ಅಜೆಂಡಾವಾಗಿ ನೀಡಿರುವುದರಿಂದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

<u>ನಿರ್ಣಯ:</u>

After the detailed discussions, the Academic Council resolved to approve the Draft statutes relating to appointment and promotion of teachers and other Academic Staff and measures for the maintenance of standards in Higher Education in the Bangalore University, as per the UGC Regulations 2018 and referred the same to the Syndicate as contemplated under Section 41 (2) of KSU Act, 2000.

ಶೂನ್ಯವೇಳೆ ಚರ್ಚೆ:

1. ಕುಲಸಚಿವರು (ಮೌ) ರವರು ಮಾತನಾಡಿ, ಕೆಲವು ವಿದ್ಯಾರ್ಥಿಗಳು ಸಿ.ಬಿ.ಸಿ.ಎಸ್. ವಿನಿಯಮಗಳಡಿ ಪ್ರವೇಶಾತಿ ಹೊಂದಿದ್ದು ಕೆಲವು ಕಾರಣಗಳಿಂದಾಗಿ ವಿದ್ಯಾಭ್ಯಾಸವನ್ನು ಮೊಟಕುಗಳಿಸಿ ಪ್ರಸ್ತುತ ಚಾಲ್ತಿಯಲ್ಲಿರುವ NEP-2020ರನ್ವಯ ಜಾರಿಯಲ್ಲಿರುವ ನಿಯಮಗಳನ್ವಯ 2/3ನೇ ವರ್ಷಕ್ಕೆ ಅವರ ವಿದ್ಯಾಭ್ಯಾಸವನ್ನು ಪ್ರವೇಶಾತಿ ಮುಂದುವರೆಸುವ ಕುರಿತು ಸ್ಪಷ್ಟೀಕರಣವನ್ನು ಕೋರಿದರು.

ಈ ಕುರಿತು ಮಾನ್ಯ ಕುಲಪತಿಗಳು ಮಾತನಾಡಿ NEP-2020ರನ್ವಯ ಜಾರಿಯಲ್ಲಿರುವ ವಿನಿಯಮಗಳಲ್ಲಿ ಹಳೆಯ ನಿಯಮಗಳಲ್ಲಿರುವ ವಿದ್ಯಾರ್ಥಿಗಳ ಮರು-ಪ್ರವೇಶಕ್ಕೆ ಅವಕಾಶವಿಲ್ಲದಿರುವುದನ್ನು ಹಾಗೂ ವಿದ್ಯಾರ್ಥಿಗಳು ಪೂರ್ಣಗೊಳಿಸಿರುವ ಕೋರ್ಸಿನ ಕ್ರೆಡಿಟ್ ಟ್ರಾನ್ಸ್‌ಫರ್ ಮಾಡಲು ತೊಂದರೆಯಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದರು ಹಾಗೂ ಹಳೆಯ ಸಿ.ಬಿ.ಸಿ.ಎಸ್. ವಿನಿಯಮಗಳಡಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಅದೇ ನಿಯಮದಡಿ ವಿದ್ಯಾಭ್ಯಾಸವನ್ನು ಪೂರೈಸಿಕೊಳ್ಳಲು ಯುಜಿಸಿ/ವಿಶ್ವವಿದ್ಯಾಲಯವು ನಿಗದಿಪಡಿಸಿರುವ ಅವಧಿಯ ತನಕ ವ್ಯಾಸಂಗ ಮಾಡಿ ಪದವಿಯನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು.

2. ಸಭೆಯಲ್ಲಿ ಹಾಜರಿದ್ದ ವಿದ್ಯಾವಿಷಯಕ ಪರಿಷತ್ತಿನ ಬಹುತೇಕ ಸದಸ್ಯರುಗಳು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾಲಯವು 1964ರಲ್ಲಿ ಪ್ರಾರಂಭವಾಗಿದ್ದು ಯು.ವಿ.ಸಿ.ಇ ಯು ವಿಶ್ವವ್ವಿದ್ಯಾಲಯದ ಅದೀನದಲ್ಲಿಯೇ ಇದ್ದು ಘನ ಸರ್ಕಾರವು ಯು.ವಿ.ಸಿ.ಇ ಮಹಾವಿದ್ಯಾಲಯವನ್ನು ಒಂದು ವಿಶ್ವವಿದ್ಯಾಲಯವಾಗಿ ಪರಿಗಣಿಸಿ ಅದಕ್ಕೆ ಸ್ವಾಯತ್ತಾ ಸ್ಥಾನಮಾನ ನೀಡಿ ಅಧಿನಿಯಮವನ್ನು ಪ್ರಕಟಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಾರಂಪರೆಗತವಾಗಿದ್ದ ಯು.ವಿ.ಸಿ.ಇ.ಯು ಮಹಾವಿದ್ಯಾಲಯವಾಗಿ ಮಾರ್ಪಟ್ಟು ಬೆಂಗಳೂರು ವಿಶ್ವವಿದ್ಯಾಲಯದಿಂದ ಬೇರ್ಪಟ್ಟಿರುವುದು ಅತಿ ನೋವಿನ ಸಂಗತಿಯಾಗಿದೆ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿಯೇ ಕೆಲವು ತಾಂತ್ರಿಕ ಕೋರ್ಸುಗಳನ್ನು ಒಳಗೊಂಡ School of Engineering ಪ್ರಾರಂಭಿಸುವುದು ಸೂಕ್ತವೆಂದು ಸಲಹೆ ನೀಡಿದರು.

ನಂತರ ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಬೇಡಿಕೆಯಿರುವ ತಾಂತ್ರಿಕ ಕೋರ್ಸುಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರಾರಂಭಿಸಬಹುದು ಎಂಬ ನಿರ್ಣಯವನ್ನು ಈ ಸಭೆಯಲ್ಲಿ ಕೈಗೊಳ್ಳಬಹುದು ಎಂದು ತಿಳಿಸಿದರು. ಈ ಬಗ್ಗೆ ಈಗಾಗಲೇ ಸಿಂಡಿಕೇಟ್ ತಾಂತ್ರಿಕ ಕೋರ್ಸುಗಳನ್ನು ಪ್ರಾರಂಭಿಸುವ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಚರ್ಚೆಯ ನಂತರ, ಮುಂದಿನ ಶೈಕ್ಷಣಿಕ ಸಾಲಿನಿಂದ ಬೇಡಿಕೆಯಿರುವ ತಾಂತ್ರಿಕ ಕೋರ್ಸುಗಳನ್ನು (B.Tech) ಪ್ರಾರಂಭಿಸಲು ವಿದ್ಯಾವಿಷಯಕ ಪರಿಷತ್ ನಿರ್ಣಯಿಸಿತು. ಮುಂದುವರೆದು, ಕೋರ್ಸುಗಳನ್ನು ಪ್ರಾರಂಭಿಸಲು ಮೂಲಭೂತ ಸೌಕರ್ಯ ಮತ್ತು ಇತರೆ ರೂಪುರೇಷೆಗಳ ಕುರಿತು ವಿಸ್ತೃತ ಯೋಜನಾ ವರದಿಯನ್ನು (Detailed Project Report) ಸಿದ್ಧಪಡಿಸಲು ಕಾನೂನು ನಿಖಾಯದ ಡೀನರ ಅಧ್ಯಕ್ಷತೆಯಲ್ಲಿ ಉಳಿದ ಡೀನರುಗಳು, ವಿಷಯ ತಜ್ಞರುಗಳನ್ನೊಳಗೊಂಡ ಒಂದು ಪರಿಣಿತರ ಸಮಿತಿ ರಚಿಸಲು ವಿದ್ಯಾವಿಷಯಕ ಪರಿಷತ್ ಅನುಮೋದಿಸಿತು. ಮುಂದುವರೆದು, ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾಲಯದ ಉನ್ನತೀಕರಣಕ್ಕಾಗಿ CSR ಅಡಿಯಲ್ಲಿ ಕಂಪನಿಯೊಂದು ರೂ.20.00 ಕೋಟಿಗಳಷ್ಟು ಹಣವನ್ನು ದೇಣಿಗೆ ರೂಪದಲ್ಲಿ ನೀಡುವುದಾಗಿ ತಿಳಿಸಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.

ಡಾ. ಸಿಂಥಿಯ ಮೆನೇಜಸ್ ಅವರು ಮಾತನಾಡಿ ಈಗಾಗಲೇ ಈ ಸಭೆಯಲ್ಲಿ ವಿಶ್ವವಿದ್ಯಾಲಯದಲ್ಲಿ ಕೆಲವು ಇಂಜಿನಿಯರಿಂಗ್ ಕೋರ್ಸುಗಳನ್ನು ಪ್ರಾರಂಭಿಸಲು ತಾತ್ವಿಕ ಒಪ್ಪಿಗೆ ನೀಡಿರುವುದರಿಂದ ಇದರ ಜೊತೆಗೆ ವಿದೇಶಿ ಭಾಷೆಗಳಿಗೆ ಸಂಬಂಧಿಸಿದ ಕೋರ್ಸುಗಳನ್ನು ಪ್ರಾರಂಭಿಸಲು ಕೋರಿದರು. ಮಾನ್ಯ ಕುಲಪತಿಗಳು ಮಾತನಾಡಿ ಇದೊಂದು ಒಳ್ಳೆಯ ಸಲಹೆ ಎಂದು ತಿಳಿಸಿ ಈ ಕುರಿತು ಕ್ರಮವಹಿಸಬಹುದಾಗಿದೆ ಎಂದು ಸಭೆಗೆ ತಿಳಿಸಿದರು.

3. ಪ್ರೊ. ರಾಮಕೃಷ್ಣ ದಾಮ್ಲೆಯವರು ಮಾತನಾಡಿ, ಯು.ವಿ.ಸಿ.ಇ ಮಹಾವಿದ್ಯಾಲಯದ ಮೊದಲ ವರ್ಷದ ಭೌತಶಾಸ್ತ್ರ, ರಸಾಯನ ಶಾಸ್ತ್ರ ಹಾಗೂ ಗಣಿತಶಾಸ್ತ್ರ ಪಠ್ಯಕ್ರಮಗಳನ್ನು ಹಲವು ವರ್ಷಗಳಿಂದ ವಿಶ್ವವಿದ್ಯಾಲಯದ ಮೂಲ ವಿಭಾಗಗಳಿಂದ ಬೋಧನಾ ಕಾರ್ಯಭಾರವನ್ನು ನಿಭಾಯಿಸಲಾಗುತ್ತಿತ್ತು. ಯು.ವಿ.ಸಿ.ಇ ಯ ಮೂಲಭೂತ ಸೌಕರ್ಯಗಳು ಅತಿ ಶೋಚನೀಯ ಸ್ಥಿತಿಯಲ್ಲಿದ್ದು ಬೋಧನೆಗೆ ಯಾವುದೇ ಪೂರಕ ವಾತಾವರಣವಿರುವುದಿಲ್ಲ, ಈಗಾಗಲೇ ಯು.ವಿ.ಸಿ.ಇ ಮಹಾವಿದ್ಯಾಲಯವನ್ನು ಒಂದು ವಿಶ್ವವಿದ್ಯಾಲಯವನ್ನಾಗಿ ಮಾರ್ಪಡಿಸಿರುವ ಪ್ರಯುಕ್ತ ನಮ್ಮ ಭೌತಶಾಸ್ತ್ರ ವಿಭಾಗದ ಪರಿಷತ್ ಸಭೆಯಲ್ಲಿ ಯು.ವಿ.ಸಿ.ಇ.ಯ ಪಠ್ಯಕ್ರಮಗಳ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಸಾದ್ಯವಿಲ್ಲವೆಂದು ನಿರ್ಣಯಿಸಿ ಯು.ವಿ.ಸಿ.ಇಯ ಪ್ರಾಂಶುಪಾಲರಿಗೆ ಒಂದು ಪತ್ರ ಮುಖೇನ ತಿಳಿಸಲಾಗಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು.

4. ಸದಸ್ಯರಾದ ಪ್ರೊ. ಸುರೇಶ್ ವಿ ನಾಡಗೌಡರ್ ರವರು ಮಾತನಾಡಿ, ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಒಂದು ಭವ್ಯ ಸಭಾಂಗಣವನ್ನು ನಿರ್ಮಿಸಲು, ಕೆಲವು ಹಳೆಯ ವಿದ್ಯಾರ್ಥಿಗಳು ಒಂದು ಕೋಟಿಯ ದೇಣಿಗೆಯನ್ನು ನೀಡಲು ಒಪ್ಪಿರುವುದಾಗಿ ತಿಳಿಸಿ ಅದರಲ್ಲಿ 25 ಲಕ್ಷ ಹಣವನ್ನು ಬಿಡುಗಡೆಗೊಳಿಸಲು ಆಸಕ್ತಿ ತೋರಿರುವುದಾಗಿ

ತಿಳಿಸಿದರು. ಈ ಕುರಿತು ವಿಶ್ವವಿದ್ಯಾಲಯದ ಅಭಿಯಂತರ ವಿಭಾಗದೊಡನೆ ಸಮಾಲೋಚನೆ ನಡೆಸಿರುವುದಾಗಿ ಸಭೆಯ ಗಮನಕ್ಕೆ ತಂದರು. ಭಾರತದಲ್ಲಿಯೇ ಪ್ರಪ್ರಥಮವಾಗಿ 5 ವರ್ಷದ ಎಲ್.ಎಲ್.ಬಿ. ಕೋರ್ಸನ್ನು ಪ್ರಾರಂಭಿಸಲು ಕಾರಣಕರ್ತರಾದ ಕಾನೂನು ಕಾಲೇಜಿನ ನಿವೃತ್ತ ಪ್ರಾಂಶುಪಾಲರಾಗಿದ್ದ ಪ್ರೊ. ವಿ.ಬಿ. ಕುಟಿನೋ ರವರ ಪರಿಶ್ರಮವನ್ನು ಶ್ಲಾಘಿಸಿ ಅವರ ಹೆಸರಿನಲ್ಲಿ ಉದ್ದೇಶಿತ ಸಭಾಂಗಣವನ್ನು ನಿರ್ಮಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

5. ಸದಸ್ಯರಾದ ಪ್ರೊ. ವಿ.ವಿ. ಸುರೇಶ್ ಬಾಬು ರವರು ಮಾತನಾಡಿ, 2022-23ನೇ ಶೈಕ್ಷಣಿಕ ಸಾಲಿನಲ್ಲಿ ಸ್ಥಳೀಯ ವಿಚಾರಣಾ ಸಮಿತಿಯ ವರದಿಗಳಲ್ಲಿ ಸಂಯೋಜಿತ ಕಾಲೇಜುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರವೇಶ ಪ್ರಮಾಣ ಅತಿ ಕಡಿಮೆ ಇದ್ದು ನಿಯಮಗಳನ್ವಯ ಶೇ. 18 ಇರುವುದಿಲ್ಲ, ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ಪ್ರವೇಶಾತಿ ನಿಯಮಗಳನ್ನು ಪಾಲನೆ ಮಾಡುತ್ತಿಲ್ಲ. ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ವೇತನವನ್ನು ರೂ.10,000-ರೂ.18,000/- ರವರೆಗೆ ಮಾತ್ರ ನೀಡುತ್ತಿದ್ದು ಸೂಕ್ತ ವೇತನ ಇಲ್ಲದಿರುವುದರಿಂದ ಅಧ್ಯಾಪಕರ ಕೊರತೆಯುಂಟಾಗಿ ಶೈಕ್ಷಣಿಕ ಗುಣಮಟ್ಟ ಕುಸಿಯುತ್ತಿದೆ ಎಂದು ತಿಳಿಸಿದರು. ಹೀಗಾಗಿ, ಸೂಕ್ತ ಸಂಭಾವನೆಯನ್ನು ನಿಗದಿಪಡಿಸುವಂತೆ ವಿಶ್ವವಿದ್ಯಾಲಯಲದಿಂದ ಕ್ರಮವಹಿಸಬೇಕೆಂದು ಕೋರಿದರು.

6. ಸದಸ್ಯರಾದ ಶ್ರೀಮತಿ ವಿ.ಪದ್ಮಾ ರವರು ಮಾತನಾಡಿ ಮೂರು ವರ್ಷದ ಡಿಪ್ಲೋಮಾ ಓದಿದ ಅಭ್ಯರ್ಥಿಗಳು ಪಿ.ಯು.ಸಿ.ಗೆ ಸಮಾನಂತರವೆಂದು ಪರಿಗಣಿಸಿ ಅವರುಗಳು ಪದವಿ ಕೋರ್ಸುಗಳಿಗೆ ಪ್ರವೇಶ ಬಯಸಿ ಬರುತ್ತಿರುವುದಾಗಿ ತಿಳಿಸಿದರು. ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಹೊರಡಿಸಿರುವ ಅಧಿಸೂಚನೆಗಳ ಪ್ರಕಾರ ಪಿ.ಯು.ಸಿ.ಗೆ ತತ್ಸಮಾನವೆಂದು ಪರಿಗಣಿಸಿರುವ ಡಿಪ್ಲೊಮೊ ಕೋರ್ಸುಗಳನ್ನು ಪದವಿ ಪ್ರವೇಶಕ್ಕೆ ಪರಿಗಣಿಸಬಹುದೆಂದು ತಿಳಿಸಲಾಯಿತು.

7. ಮತ್ತೆ ಮಾನ್ಯ ಸದಸ್ಯರು ಮಾತನಾಡಿ ಕೆಲವೊಂದು ಡಿಪ್ಲೊಮೊ ಪಡೆದಿರುವ ವಿದ್ಯಾರ್ಥಿಗಳು 2ನೇ ವರ್ಷದ ಬಿ.ಎ./ಬಿ.ಎಸ್ಸಿ./ಬಿ.ಕಾಂ ಪದವಿಗಳಿಗೆ ಪ್ರವೇಶ ಕೋರಿ ಬರುತ್ತಿದ್ದು, ಆ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದರು. ಮಾನ್ಯ ಕುಲಪತಿಗಳು ಮಾತನಾಡಿ ಇಂತಹ ಪ್ರಸ್ತಾವನೆಗಳಿಗೆ ಉನ್ನತ ಶಿಕ್ಷಣ ಪರಿಷತ್ತಿನಿಂದ ಸ್ಪಷ್ಟೀಕರಣ ಪಡೆದುಕೊಳ್ಳುವುದುದಾಗಿ ತಿಳಿಸಿದರು.

8. ಪ್ರೊ. ದಾಮ್ಲೆ ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿನ ಸ್ಥಿರ ದೂರವಾಣಿಗಳಿಗೆ (Land Line telephones) ಪಾವತಿ ಮಾಡುತ್ತಿರುವ ವೆಚ್ಚವು ಅಧಿಕವಾಗಿದ್ದು ಪ್ರಸ್ತುತ ಎಲ್ಲಾ ಅಧ್ಯಾಪಕರುಗಳು ಮೊಬೈಲ್ ದೂರವಾಣಿಯನ್ನು ಬಳಸುತ್ತಿರುವುದರಿಂದ ಸ್ಥಿರ ದೂರವಾಣಿಗಳು ಅಗತ್ಯತೆ ಇರುವುದಿಲ್ಲವೆಂದು ಸಭೆಗೆ ತಿಳಿಸಿದರು. ಪ್ರೊ. ನಾಡಗೌಡರ ಅವರು ಮಾತನಾಡಿ ವಿಭಾಗದ ಮುಖ್ಯಸ್ಥರು ಮತ್ತು ಕಚೇರಿಗೆ ಹೊರತುಪಡಿಸಿ ಎಲ್ಲಾ ದೂರವಾಣಿಗಳನ್ನು ಸ್ಥಗಿತಗೊಳಿಸಿ ಹಿಂಪಡೆಯುವಂತೆ ದೂರ ಸಂಪರ್ಕ ಇಲಾಖೆಗೆ ಸಂಬಂಧಿಸಿದ ವಿಭಾಗದಿಂದ ಪತ್ರ ಬರೆಯ ಬಹುದೆಂದು ತಿಳಿಸಿದರು.

9. ಸದಸ್ಯರಾದ ಪ್ರೊ. ಪಿ.ಸಿ. ಕೃಷ್ಣಸ್ವಾಮಿಯವರು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾಲಯದ ಕ್ರೀಡಾ ನಿರ್ದೇಶನಾಲಯಕ್ಕೆ ಹಲವಾರು ವರ್ಷಗಳ ಇತಿಹಾಸವಿರುವುದನ್ನು ತಿಳಿಸಿ ವಿಶ್ವವಿದ್ಯಾಲಯದ ಕ್ರೀಡಾ ನಿರ್ದೇಶನಾಲಯದ ಮೂಲಭೂತ ಸೌಕರ್ಯಗಳ ಬಗ್ಗೆ ಹಾಗೂ ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಕಾಲೇಜಿನ ಒಳಾಂಗಣ ಕ್ರೀಡಾಂಗಣಗಳ ಮೂಲಭೂತ ಸೌಕರ್ಯಗಳನ್ನು ಕೂಡಲೇ ಉನ್ನತೀಕರಿಸಲು ಕೋರಿದರು.

10. ಸದಸ್ಯರಾದ ಡಾ: ಎ.ಎನ್. ವೆಂಕಟೇಶ್ ರವರು ಮಾತನಾಡಿ, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರುಗಳಿಗೆ ನೀಡುತ್ತಿರುವ ಆಸನ ಭತ್ಯೆಯನ್ನು ರೂ.3,000/- ದಿಂದ ರೂ.6,000/-ಕ್ಕೆ ಹೆಚ್ಚಿಸಲು ಕೋರಿದರು. ಮಾನ್ಯ ಕುಲಪತಿಗಳು ಈ ಕುರಿತು ಅನ್ಯ ವಿಶ್ವವಿದ್ಯಾಲಯಗಳಲ್ಲಿ ಪಾವತಿಸುತ್ತಿರುವ ಆಸನ ಭತ್ಯೆ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಪತಿಯವರು



B.U.P. W.D. NO. 9537. 120 Copies. Oct. 2022